ಭಾರತದ ಹಿಂದೂಸ್ತಾನಿ ಸಂಗೀತದ ಮೇರು ಕಲಾವಿದರಲ್ಲಿ ಒಬ್ಬರಾದ ಉಸ್ತಾದ್ ಬಡೇ ಗುಲಾಂ ಅಲಿ ಖಾನ್ ಅವರನ್ನು ಭಾರತದ ಸಂಗೀತ ಲೋಕ ಇಪ್ಪತ್ತನೆಯ ಶತಮಾನದ ತಾನ್ ಸೇನ್ ಎಂದು ಬಣ್ಣಿಸಿದೆ. ತಮ್ಮ ಸುಮಧುರ ಸ್ವರ ಮತ್ತು ಸಂತನಂತಹ ವ್ಯಕ್ತಿತ್ವದಿಂದ ಸಂಗೀತ ಲೋಕದ ಉದಾತ್ತ ಧ್ಯೇಯಗಳನ್ನು ಎತ್ತಿ ಹಿಡಿದ ಈ ಮಹಾನ್ ಕಲಾವಿದನ ಹೆಸರು ರಸಿಕರ ಮನದಲ್ಲಿ ಇಂದಿಗೂ ಹಸಿರಾಗಿದೆ. ಇಪ್ಪತ್ತನೆಯ ಶತಮಾನದ ಸ್ವಾತಂತ್ರ್ಯ ಪೂರ್ವದಲ್ಲಿ ರಾಜಮಹಾರಾಜರ ಆಸ್ಥಾನಕ್ಕೆ ಮತ್ತು ಶ್ರೀಮಂತರ ಮನರಂಜನೆಗಾಗಿ ಏರ್ಪಡಿಸುತ್ತಿದ್ದ ಮೆಹಫಿಲ್ ಎಂದು ಕರೆಯಲಾಗುತ್ತಿದ್ದ ಖಾಸಗಿ ಕಾರ್ಯಕ್ರಮಕ್ಕೆ ಸೀಮಿತವಾಗಿದ್ದ ಹಿಂದೂಸ್ತಾನಿ ಸಂಗೀತವನ್ನು ಜನಸಾಮಾನ್ಯರ ಬಳಿಗೆ ತಂದ ಮೇರು ಕಲಾವಿದರಲ್ಲಿ ಉಸ್ತಾದ್ ಬಡೇ ಗುಲಾಂ ಅಲಿ ಖಾನ್ ಪ್ರಮುಖರು.

ಸಂಗೀತ ಹೃದಯದ ಭಾಷೆ. ಅದಕ್ಕೆ ಬಣ್ಣವಿಲ್ಲ, ವಾಸನೆಯಿಲ್ಲ, ಆಕಾರ ಮೊದಲೇ ಇಲ್ಲ, ಜಾತಿ, ಧರ್ಮ ಎಂಬ ಭೇದ ಭಾವಗಳಿಲ್ಲ ಎಂದು ನಂಬಿ ಬದುಕಿದ ಭಾರತದ ಹಿರಿಯ ಕಲಾವಿದರಲ್ಲಿ ಗುಲಾಂ ಅಲಿ ಖಾನ್ ಅವರದು ಎದ್ದು ಕಾಣುವ ವ್ಯಕ್ತಿತ್ವ. ಹಿಂದುಸ್ತಾನಿ ಸಂಗೀತದ ಪಟಿಯಾಲ ಘರಾಣೆ ಶೈಲಿಯ ಸಂಗೀತದಲ್ಲಿ ಭಜನ್, ಠುಮ್ರಿ, ಖಯಾಲ್ ಮತ್ತು ದ್ರುಪದ್ ಎಂಬ ಶಾಸ್ತ್ರೀಯವಾದ ಹಾಗೂ ಲಘು ಸಂಗೀತದ ರಸದೌತಣವನ್ನು ಉತ್ತರ ದಕ್ಷಿಣ ಎಂಬ ಭೇದವಿಲ್ಲದೆ ಭಾರತದ ಉದ್ದಗಲಕ್ಕೂ ರಸಿಕರಿಗೆ ಉಣಬಡಿಸಿದ ಕಲಾವಿದ ಇವರು. ಬದುಕಿನುದ್ದಕ್ಕೂ ಸಂಗೀತವನ್ನು ಉಸಿರಾಡುತ್ತಾ ಅದರ ಉದಾತ್ತ ಪರಂಪರೆಯನ್ನು ತಮ್ಮ ನಂತರದ ತಲೆಮಾರಿಗೆ ದಾಟಿಸಿದ ಈ ಶ್ರೇಷ್ಠ ಕಲಾವಿದನ ಬದುಕು ಒಂದು ರೀತಿಯಲ್ಲಿ ಮಹಾಕಾವ್ಯವಿದ್ದಂತೆ. ಈ ಜಗತ್ತಿನಲ್ಲಿ ಕೇವಲ ವಿಷಜಂತುಗಳು ಮಾತ್ರವಲ್ಲ, ಮನುಷ್ಯರು ಮತ್ತು ಅವರು ಹಿಡಿದ ಲೇಖನಿಗಳೂ ಸಹ ವಿಷಕಾರುತ್ತಿರುವ ವಿಷಮ ಸ್ಥಿತಿಯಲ್ಲಿ ಗುಲಾಂ ಅಲಿ ಖಾನ್ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದ ಮತ್ತು ಮನುಕುಲಕ್ಕೆ ಮದ್ದಾಗಬಲ್ಲ ಮಾನವೀಯ ಗುಣಗಳು ಮತ್ತು ಧರ್ಮಾತೀತ ಹಾಗೂ ಜಾತ್ಯತೀತ ನಿಲುವುಗಳು ಕಲಾವಿದರಿಗೆ ಇಂದಿಗೂ ಮಾದರಿಯಾಗಿವೆ.

ಬಡೇ ಗುಲಾಮ್ ಅಲಿ ಖಾನ್ ಅವರು ಈಗಿನ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಲಾಹೋರ್ ಬಳಿಯ ಕೌಸೂರ್ ಎಂಬಲ್ಲಿ 1902ರಲ್ಲಿ ಸಂಗೀತವನ್ನು ವೃತ್ತಿಯಾಗಿಸಿಕೊಂಡಿದ್ದ ಕುಟುಂಬವೊಂದರಲ್ಲಿ ಜನಿಸಿದರು. ಬಾಲ್ಯದ ತಮ್ಮ ಐದನೆಯ ವಯಸ್ಸಿನಲ್ಲಿ ತನ್ನ ಚಿಕ್ಕಪ್ಪ ಖಾಲೇಖಾನ್ ಅವರ ಬಳಿ ಸಾರಂಗಿ ವಾದನವನ್ನು ಮತ್ತು ಗಾಯನದ ಶಿಕ್ಷಣವನ್ನು ಪಡೆದ ಅವರು, ನಂತರ ತನ್ನ ತಂದೆ ಉಸ್ತಾದ್ ಅಲಿಭಕ್ಷ್ ಖಾನ್ ಹಾಗೂ ಇನ್ನೊಬ್ಬ ಸಂಗೀತದ ಗುರುಗಳಾದ ಬಾಬಾ ಸಿಂದೆ ಖಾನ್ ಬಳಿ ಪಟಿಯಾಲ ಘರಾಣೆ ಶೈಲಿಯ ಹಿಂದೂಸ್ತಾನಿ ಸಂಗೀತದಲ್ಲಿ ಗಾಯನವನ್ನು ಅಭ್ಯಾಸ ಮಾಡಿದರು. ಪಟಿಯಾಲ ಘರಾನ ಅಥವಾ ಘರಾಣೆ ಎಂದು ಕರೆಯಲಾಗುವ ಹಿಂದೂಸ್ತಾನಿ ಸಂಗೀತ ಶಾಲೆಯ ವೈಶಿಷ್ಟ್ಯವೆಂದರೆ, ಅದು ಅಂದಿನ ಅವಿಭಜಿತ ಭಾರತದ ಪಂಜಾಬ್, ಕಾಶ್ಮೀರ ಮತ್ತು ಆಫ್ಘಾನಿಸ್ತಾನದ ಗುಡ್ಡಗಾಡು ಪ್ರದೇಶದ ಜನಪದ ಸಂಗೀತದಿಂದ ಪ್ರಭಾವಿತ ಸಂಗೀತ ಪ್ರಕಾರವಾಗಿತ್ತು. ಈ ಪಟಿಯಾಲ ಘರಾಣೆಯ ಶೈಲಿ ಮುಂದಿನ ದಿನಗಳಲ್ಲಿ ಅಲಿ ಖಾನ್ ಅವರಿಗೆ ಸಂಗೀತ ಕ್ಷೇತ್ರದಲ್ಲಿ ಕೀರ್ತಿ ತಂದುಕೊಡುವುದರ ಜೊತೆಗೆ ಅವರ ಹಾಡುಗಾರಿಕೆಗೆ ಶ್ರೇಷ್ಠತೆಯ ಮುದ್ರೆಯೊನ್ನೊತ್ತಿತು.

ಲೋಕಸಂಗೀತ ಎಂದು ಭಾರತದಾತ್ಯಂತ ಜನಪ್ರಿಯವಾಗಿರುವ ಜನಪದ ಗಾಯನಕ್ಕೆ ಭಾರತದ